ವಾಹನ ಚಾಲಕರ ವೇತನ ಶ್ರೇಣಿ.

729 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಬಿ:5:ಎಸ್‌ಆರ್.ಎ:89, ದಿನಾಂಕ 4-9-92ರಂತೆ ವಾಹನ ಚಾಲಕರ ವೇತನ ಶ್ರೇಣಿಯನ್ನು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗೆ ಸಮನಾಗಿ ನಿಗದಿಪಡಿಸಿದ ಪರಿಣಾಮವಾಗಿ ವಾಹನ ಚಾಲಕರ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿಯ ಬದಲಾಗಿ ವೃಂದ ಬದಲಾವಣೆಗೆ ಅವಕಾಶ ಕಲ್ಪಿಸಬೇಕಾಗಿದ್ದುದು ನಿಜವಲ್ಲವೆ;

ಆ) ಅವರೆ, ಇದುವರೆವಿಗೂ ಸಂಬಂಧಿತ ನಿಯಮಾವಳಿಗಳಲ್ಲಿ ಈ ಅವಕಾಶ ಕಲ್ಪಿಸದೇ ಇರಲು ಕಾರಣವೇನು;

ಇ) ಇದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟವೇನು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ವಾಹನ ಚಾಲಕರ ವೇತನ ಶ್ರೇಣಿಯನ್ನು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗೆ ಸಮನಾಗಿ ನಿಗಧಿಪಡಿಸಿದ ನಂತರ ಚಾಲಕರ ವೃಂದದಿಂದ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ.

ಆ) ಚಾಲಕರ ವೃಂದದಿಂದ ದ್ವಿತೀಯ ದರ್ಜೆ ಸಹಾಯಕ ವೃಂದಕ್ಕೆ ವರ್ಗಾವಣೆಗೆ ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು 1978ಕ್ಕೆ ಸೂಕ್ತ ತಿದ್ದುಪಡಿ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಸಾರ್ವಜನಿಕ ಶೌಚಾಲಯಗಳ ನಿರ್ಮಾಣದಲ್ಲಿ ಅವ್ಯವಹಾರ

731 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ನಗರಾಭಿವೃದ್ಧಿ ಮತ್ತು ಕಾಡಾ, ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿರುವುದರಲ್ಲಿ ಅವ್ಯವಹಾರ ಆಗಿದ್ದು ಈ ಬಗ್ಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಅಮಾನತ್ತಿನಲ್ಲಿ ಇಟ್ಟಿರುವುದು ನಿಜವೆ?

ಬ) ಈ ಅವ್ಯವಹಾರ ತನಿಖೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ಹಾಗೂ ಯಾವ ಹಂತದಲ್ಲಿ ಇದೆ?

ಕ) ಈ ಸಂಸ್ಥೆ ವರದಿ ನೀಡಿದ್ದಲ್ಲಿ ವರದಿಯ ಸಾರಾಂಶಗಳನ್ನು ಹಾಗೂ ವರದಿಯ ಪ್ರತಿಯನ್ನು ಒದಗಿಸುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಹಾ ಮತ್ತು ವಕ್ಫ್‌ಕಂದಿಬಿ ಸಚಿವರು) :

ಅ) ಹೌದು.

ಬ) ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

ಕ) ಸಿ ಓ ಡಿ ಯು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಗುತ್ತಿಗೆ ನೀಡುವಲ್ಲಿ ಮತ್ತು ಬಿಲ್ಲುಗಳ ಪಾವತಿಯಲ್ಲಿ ಅಕ್ರಮವೆಸಗಿರುವ ಬಗ್ಗೆ ಪ್ರಸ್ತಾಪಿಸಿದೆ. ವರದಿಯು ಪರಿಶೀಲನೆಯಲ್ಲಿದೆ. ವರದಿಯ ಪ್ರತಿಯನ್ನು ಆದಷ್ಟು ಶೀಘ್ರವಾಗಿ ಒದಗಿಸಲಾಗುವುದು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 4ನೇ ಮಾರ್ಚ್, 1996 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ ವಿಷಯ ಸಮಿತಿಗಳ ನಿಯಮಾವಳಿಗೆ ತಿದ್ದುಪಡಿ ತರಲು ಕರ್ನಾಟಕ ವಿಧಾನಸಭೆಯ ನಿಯಮಾವಳಿಗಳ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ನಾನು ನಾಮನಿರ್ದೇಶನ ಮಾಡಿರುತ್ತೇನೆ.

ಶ್ರೀಯುತರುಗಳಾದ :

1)	ರಮೇಶ್ ಕುಮಾರ್	:	ಮಾನ್ಯ ವಿಧಾನ ಸಭಾಧ್ಯಕ್ಷರು ಮತ್ತು ಸಮಿತಿಯ ಅಧ್ಯಕ್ಷರು
2)	ಎಂ.ಎಸ್. ಪಾಟೀಲ್	:	ಮಾನ್ಯ ವಿಧಾನ ಸಭೆಯ ಉಪ ಸಭಾಧ್ಯಕ್ಷರು ಮತ್ತು ಸಮಿತಿಯ ಸದಸ್ಯರು.
3)	ಸಿದ್ದರಾಮಯ್ಯ	:	ಮಾನ್ಯ ಹಣಕಾಸು ಸಚಿವರು ಮತ್ತು ಸಮಿತಿಯ ಸದಸ್ಯರು
4)	ಎಂ.ಸಿ. ನಾಣಯ್ಯ	:	ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು ಮತ್ತು ಸಮಿತಿಯ ಸದಸ್ಯರು.
5)	ಕೆ.ಜಯಪ್ರಕಾಶ್ ರೆಡ್ಡಿ	:	ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಮತ್ತು ಸಮಿತಿಯ ಸದಸ್ಯರು
6)	ಬಿ.ಎಸ್. ಕೌಜಲಗಿ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
7)	ಕೆ.ಎಸ್. ಈಶ್ವರಪ್ಪ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
8)	ಕೆ.ವಿ. ಶರಣಪ್ಪ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು
9)	ಸದಾನಂದ ಗೌಡ	:	ವಿಧಾನ ಸಭಾ ಸದಸ್ಯರು ಮತ್ತು ಸಮಿತಿಯ ಸದಸ್ಯರು